

ಇಂಗ್ಲಿಷ್ ಮೂಲ: ಓ. ಹೆನ್ರಿ
**ಕನ್ನಡಕ್ಕೆ: ಜೆ.ವಿ. ಕಾರ್ಲೊ**

# ಅಪಹರಣ

ನಾವು ರೂಪಿಸಿದ್ದ ಯೋಜನೆ ತುಂಬಾ ಸರಳವಾಗಿತ್ತು. ಆದರೆ, ನಿಜ ಸಂಗತಿ ನಿಮಗಿನ್ನೂ ಗೊತ್ತಿಲ್ಲ! ಈ ಅಪಹರಣದ ಯೋಚನೆ ನಮ್ಮ ಮನಸ್ಸಿಗೆ ಹೊಕ್ಕಾಗ ನಾನು ಮತ್ತು ನನ್ನ ಗೆಳೆಯ ಬಿಲ್ಲ್ ದಕ್ಷಿಣ ಅಲಬಾಮಾದ ಆ ಸುಡುಗಾಡು ಊರಿನಲ್ಲಿದ್ದೆವು. ಆ ಊರಿನ ಹೆಸರು ಸಮ್ಮಿಟ್. ಯಾವುದೇ ಜೀವಕಳೆಯಿಲ್ಲದ ರೈತರ ಒಂದು ಊರು. ಈ ಅಪಹರಣದ ಯೋಜನೆ ಬಹುಶಃ ನಮ್ಮ ಬುದ್ಧಿಗೆ ತಾತ್ಕಾಲಿಕವಾಗಿ ಲಕ್ವ ಹೊಡೆದಿದ್ದಾಗ ಹೊಳೆದಿದ್ದರಬಹುದೇನೋ! ಹೀಗಂತ ಹಪಾಹಪಿಸಿದ್ದು ಬಿಲ್ಲ್! ಆದರೆ ಅಚಾತುರ್ಯ ಘಟಿಸಿಯಾಗಿತ್ತು.

ನಾನು ಮತ್ತು ನನ್ನ ಗೆಳೆಯ ಬಿಲ್ಲ್ ಪಶ್ಚಿಮ ಇಲಿನೋಯ್ಸ್‌ನಲ್ಲಿ ಒಂದು ದೊಡ್ಡ ಗೋಲ್‌ಮಾಲ್ ಯೋಜನೆಯನ್ನು ರೂಪಿಸಿ ಇಲ್ಲಿಗೆ ತಲುಪಿದ್ದೆವು. ನಮ್ಮಲ್ಲಿ ಆರುನೂರು ಡಾಲರುಗಳಿದ್ದವು. ಮತ್ತೂ ಎರಡು ಸಾವಿರ ಡಾಲರುಗಳ ಅಗತ್ಯವಿತ್ತು! ನಾವಿಬ್ಬರೂ ಬಹಳಷ್ಟು ಸಮಾಲೋಚನೆ ನಡೆಸಿ, ಇಂತಾ ಊರುಗಳಲ್ಲಿ ಜನರಿಗೆ ಮಕ್ಕಳೆಂದರೆ ಬಹಳ ದೊಡ್ಡ ಆಸ್ತಿ, ಸರ್ವಸ್ವ ಎಂಬ ತೀರ್ಮಾನಕ್ಕೆ ಬಂದೆವು. ಈ ಊರುಗಳಲ್ಲಿ ಪತ್ರಿಕೆಗಳ ಪ್ರಭಾವ ತುಂಬಾ ಕಡಿಮೆ ಇದ್ದುದರಿಂದ ನಮ್ಮ ಯೋಜನೆ ಕಾರ್ಯಗತಗೊಳಿಸುವುದು ತುಂಬಾ ಸಲೀಸೆಂದು ನಮಗೆ ಭಾಸವಾಯಿತು.

ಸಮ್ಮಿಟ್ ಊರಿನಲ್ಲಿ ಬಡ್ಡಿ ವ್ಯವಹಾರ ಮಾಡಿ ಸಾಕಷ್ಟು ಕೊಬ್ಬಿದ್ದ ಪಟೇಲ ಎಬೆನೆಜೆರ್ ಡೊರ್ಸೆಟ್ ಎಂಬ ಕುಳ ನಮ್ಮ ಕಣ್ಣುಗಳಿಗೆ ಎದ್ದು ಕಂಡ. ಅಲ್ಲಿನ ಚರ್ಚಿನಲ್ಲಿ ಅವನಿಗೆ ಬಹಳ ಗೌರವವಿತ್ತು. ಅವನಿಗೆ ಹತ್ತು ವರ್ಷದ ಒಬ್ಬನೇ ಮಗನಿದ್ದ. ಪಟೇಲನಿಂದ ಎರಡು ಸಾವಿರ ಪೀಕಿಸಬೇಕೆಂದರೆ ಅಂತಾನೊಬ್ಬ ಮಗನಿರಬೇಕೆಂದು ನಾವಿಬ್ಬರೂ ನಮ್ಮಿಬ್ಬರ ಬುದ್ಧಿವಂತಿಕೆಗೆ ತಲೆದೂಗಿದೆವು.